# ಕೃಷ್ಣಮಾಲಾ ತಾತ್ಪರ್ಯ

**ವೃಂದಾರಕೈರ್ವಂದಿತ ಆವಿರಾಸೀದ್ ಭೋಜೇಂದ್ರ-ಪುತ್ರ್ಯಾಂ ಭಗವಾನ್ ಮುಕುಂದಃ ।**
**ಸ ವಾಸುದೇವೋ ವಸುದೇವ-ನೀತೋ ವಜಂ ತದಾऽऽನೀಯತ ತೇನ ದುರ್ಗಾ ॥೧॥**

**ತಾತ್ಪರ್ಯ :** ವೃಂದಾರಕರೆನಿಸಿದ ದೇವತೆಗಳು ಭಗವಂತನನ್ನು ಬೇಡಿಕೊಂಡರು,ಬಿಡುಗಡೆಯನ್ನು ನೀಡುವಂತ ಭಗವಂತ ಭೂಮಿಗೆ ಇಳಿದು ಬಂದ. ಭೋಜ ವಂಶದ ಹಿರಿಯನಾದ ದೇವಕನ ಮಗಳಾದ ದೇವಕಿ, ಮತ್ತು ವಸುದೇವರಲ್ಲಿ ಕೃಷ್ಣ ಮಗನಾಗಿ ಅವತರಿಸಿದ. ವಸುದೇವ ಕೃಷ್ಣನನ್ನು ನಂದಗೋಪನ ಮನೆಗೆ ಕರೆದುಕೊಂಡು ಹೋದ. ಅಲ್ಲಿ ಮಗುವಾಗಿ ಮಲಗಿದ್ದ ದುರ್ಗಾದೇವಿಯನ್ನು ವಸುದೇವ ಮತ್ತೆ ಕಾರಾಗ್ರಹಕ್ಕೆ ಹೊತ್ತು ತಂದ. ಅವಳೇ ದುರ್ಗೆ. ಯಶೋದೆಯ ಮಗಳಾಗಿ ಹುಟ್ಟಿದವಳು, ಸ್ವತ: ಭಗವಂತನ ಮಡದಿಯಾದ ಮಾಯಾಶಕ್ತಿ ಶ್ರೀ, ಭೂ, ದುರ್ಗಾ ಅನ್ನುವ ಮೂರು ರೂಪದಲ್ಲಿ ಒಂದು ರೂಪವಾದಂತಹ ದುರ್ಗಾ ರೂಪ ಬಂದಳು.

**ಕಂಸೇ ಯಶೋದಾ-ಸುತಯಾ ವಿಷಣ್ಣೇ ಭೂಮ್ನಾ ಹತಾಯಾಮಪಿ ಪೂತನಾಯಾಮ್।**
**ದತ್ವಾಕರಂ ನಂದತಿ ತತ್ರ ನಂದೇ ಚಿಕ್ಷೇಪ ದೇವಃ ಶಕಟಾಕ್ಷ-ದೈತ್ಯಮ್ ॥೨॥**

**ತಾತ್ಪರ್ಯ :** ಯಶೋದೆಯ ಮಗು (ದುರ್ಗಾ) – ಮಾಯಾರೂಪಳಾಗಿ ಬಂದವಳು, ಇಲ್ಲಿ ದುರ್ಗಾ ರೂಪದಿಂದ ಕಂಸನ ಕಣ್ಣ ಮುಂದೆ ವ್ಯಾಪಿಸಿ ನಿಂತಳು. ಅದರಿಂದ ಕಂಸ ವಿಷಣ್ಣನಾದ. ಕಂಗೆಟ್ಟು ಹೋದ. ಅನಂತರ ಭಗವಂತನನ್ನು ಕೊಲ್ಲಬೇಕಂತ ಬಂದಂತಹ ಪೂತನೆಯ ಹಾಲನ್ನು (ಹಾಲಾಹಲವನ್ನು) ಹೀರಿ ಪ್ರಾಣದ ಜೊತೆಗೆ ಸ್ವೀಕರಿಸಿದ. ಕಂಸನಿಗೆ ಕಂದಾಯವನ್ನು, ಕರವನ್ನು ಕಟ್ಟುವುದಕ್ಕಾಗಿ ಹೋದ ನಂದಗೋಪ, ಮಗುವಿಗೆ ನಾಲ್ಕು ತಿಂಗಳು ಆಗಿದೆ, ಅನ್ನುವ ಕಾರಣಕ್ಕಾಗಿ ಮನೆಯಿಂದ ಮೊದಲು ಹೊರಡುವಂತಹ ನಿಷ್ಕ್ರಮಣ ಕ್ರಿಯೆಗೆ ಬಂದಿದ್ದಾನೆ ಜನ್ಮ ನಕ್ಷತ್ರದ ದಿನ. ಆ ದಿವಸವೇ ಮಗುವನ್ನು ಕೊಲ್ಲಬೇಕು ಅಂತ ಶಕಟನ (ಬಂಡಿಯ) ರೂಪದಲ್ಲಿ ಬಂದ ರಕ್ಕಸನನ್ನು ಕೃಷ್ಣ ಕಾಲಿನಿಂದ ಒದ್ದು ಶಕಟನನ್ನು ಕೊಂದ.

**ಸ ರೌಹಿಣೇಂಯೇನ ನಿಜಾಗ್ರಜೇನ ಶೇಷೇಣ ಪೂರ್ವಂ ಶಿಶುವದ್ ವಿರೇಜೇ ।**
**ಮಾತ್ರೇ ಸ್ವವಕ್ತ್ರೇ ಪ್ರಕಟೀಚಕಾರ ವಿಶ್ವಂ ತೃಣಾವರ್ತಮಪಿ ನ್ಯಗೃಹ್ಣಾತ್ ॥೩॥**

**ತಾತ್ಪರ್ಯ :** ಮೊದಲು ಹಾಸಿಗೆಯಾದಂತಹ ಶೇಷನೇ ಈಗ ಕೃಷ್ಣನಿಗೆ ಅಣ್ಣನಾಗಿ,ರೋಹಿಣಿಗೆ ಕಂದನಾಗಿ, ಬಲರಾಮ ಎಂಬ ಹೆಸರಿನಿಂದ ಕಂಗೊಳಿಸಿದ. ಕೃಷ್ಣ ತನ್ನ ಅಣ್ಣನ ಜೊತೆಗೆ ಆ ಇಡೀ ಊರಿಗೆ ಹಬ್ಬವಾಗಿ ನಿಂತ. ಪುಟ್ಟ ಮಕ್ಕಳು ಎರಡು ಕೂಡ ಒಂದಕ್ಕೊಂದು ಹೊಂದಿಕೊಂಡು ಓಡಾಡುತ್ತಿದ್ದರೆ, ಊರಿಡೀ ಸಂತೋಷಪಡುತಿತ್ತು. ಆ ಮಗು ತನ್ನ ಪುಟ್ಟದಾದ ಬಾಯಿಯಲ್ಲಿ,ಆಕಳಿಕೆಯ ನೆಪದಲ್ಲಿ ವಿಶ್ವವನ್ನೇ ತೋರಿಸಿದ. ತಾಯಿ ಅಚ್ಚರಿಯಿಂದ ಕಂಡು ಸಂತೋಷಪಟ್ಟಳು. ಪ್ರಪಂಚದ ಎಲ್ಲಾ ವಸ್ತುಗಳನ್ನು ಹುಲ್ಲಿನಂತೆ ತಿರುಗಿಸಿಕೊಂಡೊಯ್ಯಬಲ್ಲಂತಹ ತೃಣಾವರ್ತ ಎಂಬ ರಕ್ಕಸನನ್ನು ಕೃಷ್ಣ ಬಡಿದುಕೊಂದ.

**ಗರ್ಗ-ಸ್ತುತೋ ಮೃದ್-ಭುಗಶೇಷ-ದರ್ಶೀ ಮಾತ್ರಾ ನಿಬದ್ಧೋऽರ್ಜುನ-ಭಂಜನೋऽಲಮ್ ।**
**ವೃಕೈಸ್ತು ವೃಂದಾವನಗಃ ಸ-ರಾಮಃ ಸ ವತ್ಸ-ಪಾಲೋ ಭುವನೋತ್ಸವೇऽಭೂತ್ ।೪॥**

**ತಾತ್ಪರ್ಯ :** ನಾಮಕರಣಕ್ಕೆ ಅಂತ ವಸುದೇವ ಗರ್ಗಾಚಾರ್ಯರನ್ನು ನಂದಗೋಪನ ಮನೆಗೆ ಕಳುಹಿಸುತ್ತಾನೆ. ಆಗ ಗರ್ಗ, "ಇವನು ಸಾಮಾನ್ಯ ಮಗು ಅಲ್ಲ, 'ಕೃಷ್ಣ' (ಆಕರ್ಷಣೆಯುಳ್ಳಂತಹ ಗುಣದಿಂದ ಕೂಡಿದ ) ಎಂಬ ಇವನ ಪೂರ್ವದ ಹೆಸರನ್ನೇ ಈಗ ಈ ಮಗುವಿಗೆ ಹೆಸರಿಡುತ್ತಾ ಇದ್ದೇನೆ" ಅಂತ ಹೇಳಿ, "ಈತ ಅಸಾಮಾನ್ಯ ವ್ಯಕ್ತಿ" ಅಂತ ಕೃಷ್ಣನನ್ನು ಸ್ತೋತ್ರ ಮಾಡುವ ಮೂಲಕ ನಂದನಿಗೆ ಕೃಷ್ಣನ ಮಹಿಮೆಯನ್ನು ಹೇಳುತ್ತಾನೆ. ಒಂದು ಬಾರಿ, ಮಣ್ಣನ್ನು ತಿಂದಂತಹ ಕೃಷ್ಣನಲ್ಲಿ , ಮಣ್ಣು ತಿಂದಿದ್ಯಾ? ಎಂದು ಕೇಳಿದಾಗ, ಬಾಯಿತೆಗೆಯುತ್ತಾನೆ. ಬಾಯಿ ತೆಗೆದಾಗ ಆ ಪುಟ್ಟ ಬಾಯಲ್ಲಿ ಬ್ರಹ್ಮಾಂಡವನ್ನೇ ತೋರಿಸುತ್ತಾನೆ. ತನ್ನ ತುಂಟಾಟದಿಂದ ತಾಯಿಯ ಕಾರ್ಯಗಳಿಗೆ ತಡೆಯನ್ನು ಉಂಟು ಮಾಡುತ್ತಿದ್ದ ಕೃಷ್ಣನನ್ನು ಹಿಡಿಯುವುದಕ್ಕೋಸ್ಕರ ಉಲುಕಲ, ಒರುಳಕ್ಕೆ ಕಟ್ಟಿ ಹಾಕುತ್ತಾಳೆ. ಕಟ್ಟಿ ಹಾಕಿದ ಒರುಳನ್ನು ಹಾಗೆಯೇ ಅಂಗಳದ ಮಧ್ಯೆ ಎಳೆದುಕೊಂಡು ಮತ್ತೀ ಮರದ (ಅರ್ಜುನ ವೃಕ್ಷದ) ನಡುವೆ ಕೊಂಡು ಹೋಗ್ತಾನೆ. ಅಲ್ಲಿದ್ದ ಮಣಿಗ್ರೀವ, ನಲಕುಬೇರ ಎಂಬ ಗಂಧರ್ವರನ್ನು,ಅವರ ಜೊತೆಗೆ ಸೇರಿಕೊಂಡಿದ್ದ ದುನಿ ಮತ್ತು ಚುಮು ಎಂಬ ರಕ್ಕಸರನ್ನು ತಮಸ್ಸಿ ಗೆ ತಳ್ಳುತ್ತಾನೆ. ಹೀಗೆ ಕೃಷ್ಣ ಅನೇಕ ಲೀಲೆಯನ್ನು ತೋರುತ್ತ ಬಹಳ ಕಾಲ ಇದ್ದಂತಹ ನಂದಗೋಕುಲದಿಂದ, ಅಲ್ಲಿಯ ಪ್ರಾಣಿಗಳಿಗೆ ತೊಂದರೆ ಆಗಬಾರದು, ಅಲ್ಲಿಯ ಸಸ್ಯ ಸಂಪತ್ತು ಪೂರ್ತಿ ನಾಶವಾಗಬಾರದು ಎಂದು ಯೋಚಿಸಿ ತನ್ನದೇ ದೇಹದಿಂದ ಸಾವಿರಾರು ತನ್ನದೇ ರೂಪದ ತೋಳಗಳನ್ನು ಸೃಷ್ಟಿಸಿ ಅಲ್ಲಿಯ ಎಲ್ಲಾ ಜನರನ್ನು ವೃಂದವನಕ್ಕೆ ಬಲರಾಮನ ಜೊತೆಗೆ ಕರೆದೊಯ್ಯುತ್ತಾನೆ. ಇದರಿಂದ ಹಸುಗಳಿಗೆ, ಸಾಕು ಪ್ರಾಣಿಗಳಿಗೆ ಕೂಡ ಹೊಸ ಮೇವು, ಹೊಸ ಜಾಗ, ಹೊಸ ಪರಿಸರ ಸಿಕ್ಕು ಸಂತೋಷ ಪಡುತ್ತವೆ. ಇದರಿಂದ ಎಲ್ಲಾ ಹಸುಗಳನ್ನು ಚೆನ್ನಾಗಿ ನೋಡಿಕೊಳ್ಳುವವನಾಗಿ ಅವುಗಳ ದುಃಖವನ್ನು ಕಳೆಯುತ್ತಾನೆ. 'ಭುವನೋತ್ಸವ: ಅಭೂತ್ ' ಇಡೀ ಭೂಮಿಗೆ ಅತ್ಯಂತ ಆನಂದವನ್ನು ನೀಡುವುದಾಗಿ ಕೃಷ್ಣ ಅಲ್ಲಿ ನೀಡುತ್ತಾನೆ.

**ವಾತ್ಸಾಸುರಾರಿರ್ಬಕ-ಭಿತ್ ಸುಗೋಪೋ ಗೋ-ಗೋಪ-ಲಕ್ಷ್ಮೀ-ಕಟು-ಕಾಲಿಯ ಧುಕ್ ।**
**ಪೀತ್ವಾ ದವಂ ಚೋಗ್ರ-ಸುರಾರ್ಯಗಾರಿ: ಸಪ್ತೋಕ್ಷ-ದೈತ್ಯಚ್ಛಿದವಾಪ ಜಾಯಾಮ್ ॥ ೫ ॥**
**ತಾತ್ಪರ್ಯ :** ವತ್ಸರೂಪದಿಂದ, ಅಂದರೆ ಕರುವಿನ ರೂಪದಿಂದ ಬಂದ ರಕ್ಕಸನೊಬ್ಬನನ್ನು ಕೃಷ್ಣ ಕೊಲ್ಲುತ್ತಾನೆ. ಅಷ್ಟೇ ಅಲ್ಲ ಹಸುಗಳನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಾನೆ. ಬಕ ಎನ್ನುವ ಒಬ್ಬ ರಾಕ್ಷಸ ಕೃಷ್ಣನ ಕೈಯಲ್ಲಿ ಹಕ್ಕಿಯ ರೂಪದಿಂದ ಬಂದು ಸಾಯುತ್ತಾನೆ. ಅನಂತರ ಆ ಇಡೀ ಬೃಂದಾವನ ಹಸುಗಳಿಗೆ ಕರುಗಳಿಗೆ ಬಹಳ ಇಷ್ಟವಾಗಿತ್ತು. ಯಮುನಾ ಮಡುವಿನಲ್ಲಿ ಅಲ್ಲಿಯ ಗೋವುಗಳಿಗೆ, ಉಳಿದ ಪ್ರಾಣಿಗಳಿಗೆ ಮಾರಕನಾಗಿದ್ದ ಕಾಳಿಯ ಎಂಬ ನಾಗನನ್ನು ಕೃಷ್ಣ ಮಣಿಸಿದ. ಗೊಲ್ಲರು ಓಡಾಡುವ ಸಮಯದಲ್ಲಿ, ಹಸುಗಳನ್ನು ಮೇಯಿಸುವ ಸಮಯದಲ್ಲಿ,ಆವರಿಸಿದ ಕಾಳ್ಗಿಚ್ಚಿನಿಂದ ಭಯಗೊಂಡು ಕೃಷ್ಣಾ....ಎಂದು ಕರೆದು ಕೂಗಿದಾಗ ಯಾರಿಗೂ ತೊಂದರೆ ಆಗದಂತೆ ಇಡೀ ಕಾಳ್ಗಿಚ್ಚನ್ನು ತಾನೇ ಕುಡಿದು ಬಿಟ್ಟ. ಏಳು ಗೂಳಿಗಳ ರೂಪದಲ್ಲಿ ನೆಲೆಸಿದ್ದ ರಕ್ಕಸರನ್ನು ಮುಗಿಸಿ,ಯಶೋದೆಯ ಅಣ್ಣನಾದ ಕುಂಭಕನ ಮಗಳಾದ ನೀಲೆಯನ್ನು ಕೃಷ್ಣ ಮದುವೆಯಾದ.

**[ಹತ್ವಾ ಖರಂ ದೈತ್ಯಮಥ ಪ್ರಲಂಬಂ ಬಲೇನ ಪೀತ್ವಾ ಚ ಪುನರ್ದವಾಗ್ನಿಮ್ ೧]**
**ವಿಪ್ರಾಭಿರಾಪ್ತೋ ಗಿರಿ-ಗುಪ್ತ-ಗೋಪೋ ಗೋವಿಂದ ಇಂದ್ರಾರ್ಚಿತ ಐಕ್ಷಿ ಗೋಪೈಃ ।೬।**
**ತಾತ್ಪರ್ಯ :** ಖರ ಅಂದರೆ ಕತ್ತೆಯ ರೂಪದ ಧೇನುಕಾಸುರ ಎಂಬ ರಕ್ಕಸನನ್ನು ಕೊಂದ. ಮುಂದೆ ಮಕ್ಕಳ ಜೊತೆಗೆ ಇದ್ದು ಆಟವಾಡುವ ನೆಪದಲ್ಲಿ ಬಂದ ಪ್ರಲಂಬ ಅನ್ನುವ ರಕ್ಕಸನನ್ನು ಬಲರಾಮನ ಕೈಯಿಂದ ಕೊಲ್ಲಿಸಿದ. ಇನ್ನೊಂದು ಬಾರಿ ಕಾಡ್ಗಿಚ್ಚು ಆವರಿಸಿ ಭಯಪಟ್ಟಾಗ, ಕೃಷ್ಣ ಕಾಡ್ಗಿಚ್ಚಿನಿಂದ ಮತ್ತೆ ಗೋಪಾಲಕರನ್ನು ರಕ್ಷಿಸಿದ. ಹಸುವನ್ನು ಮೇಯಿಸುವ ಸಂದರ್ಭದಲ್ಲಿ ,"ಹಸಿವಾಗುತ್ತೆ" ಅಂತ ಹುಡುಗರೆಲ್ಲರೂ ಕೃಷ್ಣನನ್ನು ಬೇಡಿಕೊಂಡಾಗ, ಆಹಾರಕ್ಕಾಗಿ ಕೃಷ್ಣ ಅಲ್ಲಿಯೇ ಇದ್ದಂತಹ ವಿಪ್ರ ಪತ್ನಿಯರಲ್ಲಿಗೆ ಕಳುಹಿಸಿ ಕೊನೆಗೆ ತಾನು ತೆರಳಿ, ಆ ಎಲ್ಲರಿಂದಲೂ ಕೂಡ ಹವಿಸ್ಸನ್ನು ಸ್ವೀಕರಿಸಿ ಅನುಗ್ರಹಿಸಿದ. ಗೋವರ್ಧನಪರ್ವತವನ್ನು ಎತ್ತಿ , ಗೋಪಾಲಕರನ್ನು ಮಹಾ ಆಪತ್ತಿನಿಂದ ಕಾಪಾಡಿದ.ಆ ಸಮಯದಲ್ಲಿ ಇಂದ್ರನು ತನ್ನ ಪೂಜೆಯನ್ನು ನಡೆಸದೇ ಪರ್ವತದ ಪೂಜೆಯನ್ನು ನಡೆಸಿದಂತ ಕೃಷ್ಣನ ಮೇಲೆ ಸುರಿಸಿದ ಮಳೆಯನ್ನು ಅನಾಯಾಸದಿಂದ ತಡೆದದ್ದರಿಂದ, ತನ್ನ ತಪ್ಪನ್ನು ಅರಿತುಕೊಂಡು ತಾನೇ ಸುರಭಿಯ ಹಾಲನ್ನು ತೆಗೆದುಕೊಂಡು ಬಂದು 'ಗೋವಿಂದ...'ಅಂತ ಕೃಷ್ಣನನ್ನು ಕರೆದು ಪೂಜಿಸಿದ.ಈ ಮಹಿಮೆಯನ್ನು ಎಲ್ಲಾ ಗೋಪಾಲಕರು ಕೂಡ ನೇರವಾಗಿ ಕಂಡು, ಕೃಷ್ಣನನ್ನು ಇನ್ನಷ್ಟು ಹೆಚ್ಚು ಆತ್ಮೀಯರಾಗಿ,ದೇವರಾಗಿ ನೋಡಲಾರಂಭಿಸಿದರು.

**ಕಾತ್ಯಾಯನೀ-ಭಕ್ತಿಮತೀಶ್ಚ ಕನ್ಯಾಃ ಉವಾಹ ರೇಮೇಽಖಿಲ-ಗೋಪಿಕಾಭಿಃ ।**
**ಅದಾಚ್ಚ ತಾಭ್ಯೋ ದಶ-ಲಕ್ಷ-ಪುತ್ರಾನ್ ಸ ಶಂಖಚೂಡಾರಿರರಿಷ್ಟಮಾಸ್ಯತ್ ॥೭॥**
**ತಾತ್ಪರ್ಯ :** ಕಾತ್ಯಾಯಿನಿ ದೇವತೆಗೆ ಸಂಬಂಧಪಟ್ಟ ಭದ್ರಕಾಳಿಯನ್ನು ಚೆನ್ನಾಗಿ ಆರಾಧಿಸಿದ ಕನ್ಯೆಯರ ಕೈಯನ್ನು ಹಿಡಿದ.ಎಲ್ಲಾ ಗೊಲ್ಲತಿಯರ ಜೊತೆಗೆ ಸಂತೋಷದಿಂದ ಕ್ರೀಡಿಸಿ ಅವರಿಗೆ ಆನಂದವನ್ನು ಕೊಟ್ಟ. ಹಾಗೆಯೇ ಮುಂದೆ ಅವರಿಗೆಲ್ಲರಿಗೂ ಮಕ್ಕಳನ್ನು ಕರುಣಿಸಿ, (ಒಟ್ಟಿಗೆ ೧೦ ಲಕ್ಷ ಮಕ್ಕಳು) ಒಂದು ದೊಡ್ಡ ಸೇನೆಗೆ ಕಾರಣನಾದ.ಆ ಹುಡುಗಿಯರಿಗೆಲ್ಲ ತೊಂದರೆಯನ್ನು ಕೊಡಲಿಕ್ಕೆ ಬಂದ ಶಂಖಚೂಡ ಎಂಬ ಯಕ್ಷನನ್ನು ಕೊಂದ .ಮತ್ತೆ ಗೂಳಿಯ ರೂಪದಲ್ಲಿ ಬಂದಂತಹ ಅರಿಷ್ಟಾಸುರ ಎಂಬ ರಕ್ಕಸನನ್ನು ನಾಶಪಡಿಸಿದ.

**ನಂದಾವಿತಾಽಹೇರ್ವರುಣಸ್ಯ ದೂತಾದ್ ವೈಕುಂಠ-ದರ್ಶೀ ಪಶು-ಜೀವನೇಭ್ಯಃ ।**
**ಕೇಶ್ಯರ್ವ-ಹಾ ವ್ಯೋಮ-ಸುರಾರಿ-ಹಾರೀ ಕಂಸಾಘಮಕ್ರೂರ-ಗಿರಾಽಶೃಣೋತ್ ಸಃ ॥ ೮ ॥**
**ತಾತ್ಪರ್ಯ :** ನಂದನನ್ನು ಎಳೆದುಕೊಂಡು ಹೋದ ಹೆಬ್ಬಾವಿ ನಿಂದ ಕೃಷ್ಣ ಪಾರು ಮಾಡಿದ. ಮತ್ತೊಮ್ಮೆ ನಂದ ಸ್ನಾನಮಾಡಲು ಹೋದ ಸಮಯದಲ್ಲಿ,ವರುಣನ ದೂತನಿಂದ ಸೆರೆಹಿಡಿಯಲ್ಪಟ್ಟಾಗ, ಮತ್ತೆ ಕೃಷ್ಣ ಬಿಡಿಸಿದ. ಯಾವ ಶಾಸ್ತ್ರದ ನೇರವಾದ ಪರಿಚಯ ಇಲ್ಲದಿದ್ದರೂ, ಕೃಷ್ಣನನ್ನು ಹತ್ತಿರದಿಂದ ಕಂಡು ಕೇಳಿದ ಸಂಗತಿಯಿಂದಲೇ ಅವನನ್ನು ಆರಾಧಿಸಿದ, ಪಶುಗಳನ್ನು ನೋಡಿಕೊಳ್ಳುವುದನ್ನೇ ಜೀವನವಾಗಿ ಪ್ರಾಮಾಣಿಕವಾಗಿ ಸ್ವಧರ್ಮವನ್ನು ಆಚಾರಿಸಿದ ಗೊಲ್ಲರಿಗೆ ವೈಕುಂಠವನ್ನೇ ತೋರಿದ. ಕುದುರೆ ರೂಪದಿಂದ ಬಂದಂತಹ ಕೇಶಿ ಅನ್ನುವಂತಹ ರಕ್ಕಸನನ್ನು ಕೊಂದ, ವ್ಯೋಮ ಅನ್ನುವ ಅಸುರನನ್ನು ನಾಶಪಡಿಸಿದ. ಕಂಸನ ಮಾತಿನಂತೆ ತನ್ನಲ್ಲಿಗೆ ಕರೆ ತರಬೇಕು ಅಂತ ಅಕ್ರೂರನನ್ನು ಕಳುಹಿಸಿದಾಗ, ಅಕ್ರೂರ ಕಂಸನ ಎಲ್ಲಾ ಕುಟಿಲ ನೀತಿಯನ್ನು ಹೇಳಿದಾಗ, ಅದನ್ನು ಪ್ರೀತಿಯಿಂದ ಕೃಷ್ಣ ಆಲಿಸಿದ.

**ಸಾಕ್ರೂರ-ರಾಮೋ ಮಧುರಾಂ ಸ ಗಚ್ಛನ್ ಅಕ್ರೂರ-ದೃಷ್ಟೋ ಯಮುನಾ-ಜಲೇ ಚ ।**
**ಅವೈಕ್ಷಿ ಪೌರೈರ್ಧೃತ-ಧೌತ-ವಾಸಾಃ ಅಲಕ್ತಕಾಕ್ತೋಽಮಲ-ಮಾಲ-ಧಾರೀ ॥ ೯ ॥**
**ತಾತ್ಪರ್ಯ :** ಅಕ್ರೂರನ ಜೊತೆಗೆ ಬಲರಾಮನನ್ನು ಕೂಡಿಕೊಂಡು ಕಂಸನಿದ್ದ ಮಥುರೆಯ ಕಡೆಗೆ ಹೊರಟ. ಕರೆದೊಯ್ಯುವಾಗ ದಾರಿಯಲ್ಲಿ ಸಂಜೆಯ ಸಂಧ್ಯಾವಂದನೆಗಾಗಿ ಯಮುನೆಯ ತಟವನ್ನು ಸೇರಿ ಆಕ್ರೂರನು ನೀರಿನಲ್ಲಿ ಮುಳುಗಿದಾಗ,ಕೃಷ್ಣ ತನ್ನ ದರ್ಶನವನ್ನು ಯಮುನೆಯ ತಳದಲ್ಲಿ ತೋರಿದ. ಮಥುರೆಯನ್ನು ಪ್ರವೇಶಿಸುವಾಗ, ಮಥುರೆಯ ಜನರು ಕೃಷ್ಣ ಇದ್ದ ಬಗೆಯನ್ನು ಹೀಗೆ ವರ್ಣಿಸುತ್ತಾ,"ಅತ್ಯಂತ ಚೆಂದವಾದ ಬಿಳಿಯಾದ ಬಟ್ಟೆಯನ್ನು ತೊಟ್ಟಿದ್ದಾನೆ, ಕೈಕಾಲುಗಳಿಗೆ ಅಲತಿಕೆಗಳನ್ನು ಹಾಕಿಕೊಂಡಂತೆ ಕೆಂಪಾಗಿ ಕಾಣುತ್ತಿದ್ದಾನೆ, ದೇಹಕ್ಕೆ ಚಂದದ ಗಂಧವನ್ನು ಪೂಸಿಕೊಂಡ ಜೊತೆಗೆ ಉದ್ದದ ವನಮಾಲೆಯನ್ನು ಹಾಕಿಕೊಂಡಿದ್ದಾನೆ".ಇಂತಹ ಕೃಷ್ಣನನ್ನು ಮಥುರೆಯ ಜನ ಕಣ್ಣು ತುಂಬಾ ನೋಡಿ ಸಂತೋಷಪಟ್ಟರು.

**ಸ ಸುಂದರಶ್ಚಂದನ-ಚರ್ಚಿತಾಂಗಃ ಚಾಪಂ ಚ ಚಿತ್ತಂ ಚ ಚಕರ್ಷ ಕಾಂಸಮ್ ।**
**ಸ-ಹಸ್ತಿನಂ ಹಸ್ತಿ-ಪತಿಂ ಚ ಹತ್ವಾ ಚಾಣೂರ-ಹಾ ಮುಷ್ಟಿಕ-ವೈರಿಣಾಽಭಾತ್ ॥ ೧೦ ॥**
**ತಾತ್ಪರ್ಯ :** ದೇಹಕ್ಕೆ ಚಂದನವನ್ನು ಹಚ್ಚಿಕೊಂಡ ಅದೇ ಕೃಷ್ಣ ತನ್ನ ಪ್ರತಿಯೊಂದು ಅಂಗದಿಂದಲೂ ಸುಂದರವಾಗಿ ಕಾಣ್ಣುತ್ತಾ ಇದ್ದವನು, ಕಂಸನ ಬಿಲ್ಲನ್ನು ಮುರಿದ.ಹಾಗೆಯೇ ಆ ಬಿಲ್ಲನ್ನು ಮುರಿಯುವುದರ ಜೊತೆಗೆ ಕಂಸನ ಮನಸ್ಸನ್ನು ಕೂಡ ಜಗ್ಗಿದ. ಕಂಸನ ಆನೆಯ ಜೊತೆಗೆ, ಆನೆಯನ್ನು ಪ್ರಚೋದನೆ ಮಾಡುತ್ತಿದ್ದ ಮಾಹುತನನ್ನು ಕೊಂದುಬಿಟ್ಟ. ಚಾಣೂರ ಎಂಬ ಮಲ್ಲನನ್ನು ಚಚ್ಚಿ ಕೊಂದ.ಮಲ್ಲನಾದ ಮುಷ್ಟಿಕನನ್ನು ಕೊಂದ.ಬಲರಾಮನ ಜೊತೆಗೆ ಆ ಇಡೀ ಸಭೆಯಲ್ಲಿ ಬೆಳಗಿನಿಂತ.

**ಬಲೋಽಥ ಕಂಸಾವರಜಾನ್ ಜಘಾನ ಬಲಾನುಜಃ ಕಂಸ-ಬಲಂ ಚ ಕಂಸಮ್ ।**
**ಪ್ರಸಾದ್ಯ ಮಾತಾ-ಪಿತರೌ ನೃಪಂ ಚ ಚಕ್ರೇ ವಿಶೋಕಸ್ಯ ಪಿತಾ ಸ-ರಾಮಃ ॥ ೧೧ ॥**
**ತಾತ್ಪರ್ಯ :** ಆ ಬಳಿಕ ಬಲರಾಮ ಕಂಸನ ತಮ್ಮಂದಿರನೆಲ್ಲ ಕೊಂದ. ಬಲರಾಮನ ತಮ್ಮನಾದಂತಹ ಶ್ರೀ ಕೃಷ್ಣ, ಕಂಸನ ಸೇನೆಯನ್ನು,ಕಂಸನನ್ನು ಕೂಡ ಸದೆಬಡಿದ. ಕುಬ್ಜೆ ಎಂಬುವವಳು ಪೂರ್ವದಲ್ಲಿ ಶ್ರೀ ಕೃಷ್ಣನಿಗೆ ಅಲತಿಕೆಯನ್ನು,ಗಂಧವನ್ನು ಪೂಸಿದವಳು ಶ್ರೀ ಕೃಷ್ಣನಿಗೆ ಶರಣಾಗುತ್ತಾಳೆ.ಮತ್ತೆ ಕಂಸನನ್ನು ಕೊಂದ ಮೇಲೆ ಆಕೆಯನ್ನು ಭೇಟಿಯಾಗಿ ಆಕೆಯಲ್ಲಿ ವಿಶೋಕ ಅನ್ನುವ ಮಗನನ್ನು ಪಡೆಯುತ್ತಾನೆ. ಬಲರಾಮನ ಜೊತೆಗೆ ತಂದೆ ತಾಯಿಯರನ್ನು ಹೋಗಿ ಭೇಟಿಯಾಗಿ ಅವರನ್ನು ಸಂತೈಸುತ್ತಾನೆ. ಉಗ್ರಸೇನನನ್ನು ಕೂಡ ಕಂಸನ ಬಂಧನದಿಂದ ಬಿಡಿಸಿ ಸಿಂಹಾಸನದಲ್ಲಿ ಕೂಡಿಸಿ,ಅಭಿಷೇಕ ಮಾಡಿ ಆ ಇಡೀ ರಾಜ್ಯದ ಹೊಣೆಗಾರಿಕೆಯನ್ನು ಒಪ್ಪಿಸುತ್ತಾನೆ.

**ದ್ವಿಜತ್ವಮಾಪ್ತೋಥ ವಿಮುಚ್ಯ ನಂದಂ ಸುತಂ ಮೃತಂ ಪ್ರಾಗ್ ಗುರವೇ ದದೌ ಸಃ ।**
**ಜರಾ-ಸುತಂ ದ್ವಾರ-ರುಧಂ ಸ-ರಾಮೋ ಜಿಗಾಯ ಚಾಷ್ಟಾದಶ-ಯುತ್ಸು ಚೇಶಃ ॥೧೨॥**
**ತಾತ್ಪರ್ಯ :** ತಂದೆ ತಾಯಿಗಳಾದಂತಹ ವಸುದೇವ, ದೇವಕಿಯರು ಮಗನಿಗೆ ಕೂಡಲೇ ಯಜ್ಞೋಪವೀತವನ್ನು ಧರಿಸುವ ಉಪನಯನ ಕರ್ಮವನ್ನು ನಡೆಸುತ್ತಾರೆ.ಆ ಬಳಿಕ ನಂದನನ್ನು ಬೃಂದಾವನಕ್ಕೆ ಕಳುಹಿಸಿ ಕೊಡುತ್ತಾರೆ. ಗುರುಕುಲಕ್ಕೆ ಕೃಷ್ಣ,ಬಲರಾಮನನ್ನು ಸೇರಿಸಿದ ಬಳಿಕ, ಗುರುಕುಲದಲ್ಲಿ ಗುರುಗಳಿಗೆ ವಿದ್ಯೆಯನ್ನು ಕಲಿತ ಕೃತಜ್ಞತೆಗಾಗಿ ಗುರುದಕ್ಷಿಣೆ ಒಪ್ಪಿಸುವ ನೆಪದಲ್ಲಿ ಎಂದೋ ಸತ್ತು ಹೋಗಿದ್ದ ಗುರುವಿನ ಮಗನನ್ನು ಬದುಕಿಸಿ ಸಾಂದಿಪನಿ ಋಷಿಗಳಿಗೆ ತಂದು ಒಪ್ಪಿಸುತ್ತಾನೆ. ಬಲರಾಮನ ಜೊತೆಗೆ ಮಥುರೆಗೆ ಮರಳಿ ಬರಬೇಕಾದರೆ,ಊರಿನ ಹೊರಬಾಗಿಲಿನಲ್ಲೆ ದೊಡ್ಡ ಸೇನೆಯೊಂದಿಗೆ ಅಡ್ಡ ಕಟ್ಟಿ ನಿಂತಂತಹ ಜರಾಸಂಧನನ್ನು ಕಾಣುತ್ತಾನೆ. ಹಾಗೆಯೇ ಜರಾಸಂಧ ೧೮ ಬಾರಿ ಕೃಷ್ಣನನ್ನು ಬೇರೆ ಬೇರೆ ಸಂದರ್ಭದಲ್ಲಿ ಎದುರಿಸುತ್ತಾನೆ.ಅಂತಹ ಕದನದಲ್ಲಿ, ಸಂಗ್ರಾಮದಲ್ಲಿ ಎಲ್ಲ ಬಾರಿಯೂ ಕೃಷ್ಣ ಜರಾಸಂಧನನ್ನು ಸೋಲಿಸುತ್ತಾನೆ.

**ಪ್ರಾರ್ಥಾನಥಾಕ್ರೂರಮಯಾಪಯತ್ ಸಃ ಭೀಮಾದ್ಯವಾಪ್ತೋ ವ್ರಜಮುದ್ಧವಂ ಚ ।**
**ಗೋಮಂತ-ಗೋ ರಾಮಯುತಃ ಕಿರೀಟೀ ಜರಾ-ಸುತಂ ಪ್ರಾಸ್ಯ ಸೃಗಾಲ-ಹಾಽಭೂತ್ ॥೧೩॥**
**ತಾತ್ಪರ್ಯ :** ಆ ಬಳಿಕ ಪಾಂಡವರ ಯೋಗಕ್ಷೇಮವನ್ನು ತಿಳಿಯುವುದಕ್ಕಾಗಿ ಕೃಷ್ಣ ಅಕ್ರೂರನನ್ನು ಪಾಂಡವರ ಬಳಿಗೆ ಕಳುಹಿಸಿದನು. ಹಾಗೆಯೇ ಭೀಮಾರ್ಜುನಸಹದೇವರನ್ನು ತನ್ನೆಡೆಗೆ ಕರೆಸಿಕೊಂಡು ಅವರಿಗೆ ವಿಶೇಷವಾದ ವಿದ್ಯೆಯನ್ನು ಒದಗಿಸಿದ. ಗೋಕುಲಕ್ಕೆ ತನ್ನ ಯೋಗಕ್ಷೇಮದ ಬಗ್ಗೆ ತಿಳಿಸಲು ಉದ್ದವನನ್ನು ಕೃಷ್ಣ ಕಳುಹಿಸಿಕೊಟ್ಟು. ಬಲರಾಮನ ಜೊತೆಗೆ ಗೋಮಂತ ಪರ್ವತಕ್ಕೆ ತರಲಿ ಅಲ್ಲಿ ಪರಶುರಾಮನನ್ನು ಕಂಡ. ಅದೇ ಬೆಟ್ಟದಲ್ಲಿ ತಾನು ನಿಂತಿದ್ದ ಸಂದರ್ಭದಲ್ಲಿ, ತನ್ನ ವಾಹನವೆನಿಸಿದ ಗರುಡನು ವೈಕುಂಠದಿಂದ ತನ್ನ ಕಿರೀಟವನ್ನು ತಂದುಕೊಟ್ಟ. ಹಿಂದೊಮ್ಮೆ ಬಲಿಯು ಮಲಗಿದ್ದ ವಿಷ್ಣುವಿನ ತಲೆಯಿಂದ ಕಿರೀಟವನ್ನು ಹೊತ್ತು ಒಯ್ಯುವ ಸಮಯದಲ್ಲಿ, ಗರುಡ ಮತ್ತೆ ಅದನ್ನು ಕೃಷ್ಣನ ಅಷ್ಟೇ ಆಕೃತಿಯ ತಲೆಗೆ ಕಿರೀಟವನ್ನು ಸರಿಯಾಗಿ ತೊಡಿಸಿ ಭಗವಂತನ ಮೂಲ ರೂಪವು ಕೃಷ್ಣನು ಒಂದೇ ಅನ್ನುವುದನ್ನು ತಿಳಿಸಿದ. ಆ ಬಳಿಕ ಜರಾಸಂಧನನ್ನು ಸೋಲಿಸಿ, ಅಲ್ಲಿಂದ ಮುಂದೆ ಸ್ರಗಾಲ ವಾಸುದೇವನ ತಲೆಯನ್ನು ತೆಗೆದ.

**ದುರ್ಮಂತ್ರ-ಭೂಪೈರ್ಭಯತೋಽಭಿಷಿಕ್ತ: ಕೃಷ್ಣೋ ವಿದರ್ಭೇಕೃಽತ ವಿಶ್ವ-ರೂಪಮ್ ।**
**ಕೃತ್ವಾ ಪುರೀಂ ಯಾವನಮೀರಿತಂ ತೈಃ ಸ ಘಾತಯಿತ್ವಾಽಽಶು ನೃಪಾನಜೈಷಿತ್ ॥ ೧೪ ॥**
**ತಾತ್ಪರ್ಯ :** ಕೃಷ್ಣನನ್ನು ಅವಮಾನಿಸುವುದಕ್ಕಾಗಿ ವಿದರ್ಭ ದೇಶದಲ್ಲಿ ಒಂದು ದೊಡ್ಡ ರಾಜರ ಸಮುದಾಯ ಒಟ್ಟಾಗಿತ್ತು. ದುಷ್ಟ ಮಂತ್ರಾಲೋಚನೆಯಿಂದ ಕೃಷ್ಣನನ್ನು ಎದುರಿಸುವ ದೊಡ್ಡ ಒಪ್ಪಂದ ಒಂದನ್ನು ಮಾಡಿಕೊಂಡಿದ್ದರು .ಆ ಸಂದರ್ಭದಲ್ಲಿ ಇಂದ್ರ ಆ ಸಭೆಗೆ ಬಂದು," ಕೃಷ್ಣನನ್ನು ನೀವು ಅವಮಾನಿಸಿದರೆ ನಿಮ್ಮೆಲ್ಲರನ್ನು ನಿಗ್ರಹಿಸುತ್ತೇನೆ " ಅಂತ ಬೆದರಿಸಿದ ಇದರಿಂದ ಬೆದರಿದ ಅರಸರ ಗುಂಪು ಕೃಷ್ಣನನ್ನು ಕರೆದು ಅಭಿಷೇಕ ಮಾಡಿ, ನಾವೆಲ್ಲರೂ ಕೂಡ ನಿಮಗೆ ಪೂರಕವಾಗಿ ಬದುಕುತ್ತೇವೆ ಎಂದು ಮಾತು ಕೊಟ್ಟರು. ಕೃಷ್ಣ ಭೀಷ್ಮಕನಿಗೆ ತನ್ನ ವಿಶ್ವರೂಪವನ್ನು ತೋರಿಸಿದ. ಆ ಬಳಿಕ ಜರಾಸಂಧನ ನಿರಂತರ ಉಪದ್ರವವನ್ನು ಅನುಭವಿಸುತ್ತಾ ಇದ್ದ ಮಥುರೆಗೆ ಮುಕ್ತಿಯನ್ನು ಕೊಡುವುದಕ್ಕಾಗಿ ದ್ವಾರಕೆಯನ್ನು ನಿರ್ಮಿಸಿದ. ಹಾಗೆಯೇ ಅರಸರ ಮಾತುಗಳನ್ನೆಲ್ಲಾ ಕೇಳಿ ಜರಾಸಂಧನ ಆಲಯದಲ್ಲಿದ್ದ ಕಾಲಯವನ ಕೃಷ್ಣನನ್ನು ದಂಡೆತ್ತಿ ಬಂದ. ಅಂತಹ ಕಾಲಾಯವನನನ್ನು ಕೃಷ್ಣ ಒಂದು ಗುಹೆಗೆ ಕರೆದೊಯ್ದು, ಮಲಗಿದ್ದ ಮುಚುಕುಂದನಿಂದ ಆತನನ್ನು ಕೊಲ್ಲಿಸಿದ. ಹೀಗೆ ಎಲ್ಲಾ ರಾಜರನ್ನು ಕೂಡ ಕೃಷ್ಣ ಬಗೆಬಗೆಯಿಂದ ಗೆದ್ದು ರಾಜರಾಜೇಶ್ವರ ಎನಿಸಿದ.

**ಸ ರೇವತೀ–ಕಾಂತ–ಯುತೊ ಜಿತಾರಿ: ಭೈಷ್ಮೀಮವಾಪ್ಯಾಕೃತ ಶಂಬರಾರಿಮ್ ।**
**ಸ್ಯಮಂತಕಂ ಜಾಂಬವತೀಂ ಚ ಲಬ್ಧ್ವಾ ಸತ್ಯಾಂ ಚ ಲೇಭೇಽಜನಯಚ್ಚ ಸಾಂಬಮ್ ॥೧೫॥**
**ತಾತ್ಪರ್ಯ :** ರೇವತಿಗೆ ಗಂಡನಾಗಿ ಬಲರಾಮ ಜೊತೆಗೂಡಿದ. ಆ ಬಲರಾಮನ ಜೊತೆಗೆ ತನ್ನ ಶತ್ರುಗಳನೆಲ್ಲಾ ಯುದ್ಧದಲ್ಲಿ ಸೋಲಿಸಿದ. ಭೀಷ್ಮಕನ ಮಗಳಾದ ರುಕ್ಮಿಣಿಯನ್ನು ತಾನೇ ಹೋಗಿ ಕರೆತಂದ.ಅವಳಲ್ಲಿ ಶಂಬರಾಸುರನನ್ನು ಕೊಲ್ಲುವಂತಹ ಪ್ರದ್ಯುಮ್ನನನ್ನು ಮಗನಾಗಿ ಪಡೆದ.ಮುಂದೆ ಪ್ರದ್ಯುಮ್ನ ಶಂಬರಾಸುರನನ್ನು ಕೊಂದ. ಜಾಂಬವಂಥನ ಗುಹೆಯನ್ನು ಹೊಕ್ಕು ಅಲ್ಲಿ ಅಡಗಿದ್ದ ಸ್ಯಮಂತಕ ಮಣಿಯನ್ನು ಪಡೆದು ಬಂದ. ತನ್ನ ಅಪವಾದವನ್ನು ಕಳೆದುಕೊಂಡು ಜಾಂಬವತಿಯನ್ನು ಕೈಹಿಡಿದ. ಆ ಮಣಿಯನ್ನು ಮರಳಿ ಸತ್ರಾಜಿತನಿಗೆ ಒಪ್ಪಿಸಿ ಅವನ ಮಗಳಾದ ಸತ್ಯಭಾಮೆಯ ಕೈಯನ್ನು ಹಿಡಿದ. ಜಾಂಬವತಿಯಿಂದ ಸಾಂಬನನ್ನು ಮಗನಾಗಿ ಕೃಷ್ಣ ಪಡೆದ.

**ವಿಚಕ್ರ–ಹಾ ಭೂತ–ನುದಸ್ತ–ರಕ್ಷಾಃ ಬಲೇನ ಸಾಲ್ವಾರ್ದನ–ಸಾತ್ಯಕೇನ ।**
**ಯುತಃ ಸ ಹಂಸಂ ಡಿಭಕಂ ಹತ್ವಾ ಗದಾಗ್ರಜೋಽಭಾದ್ ದಯಿತ–ತ್ರಿ–ಶುಕ್ಲ: ॥೧೬॥**
**ತಾತ್ಪರ್ಯ :** ಸಾಲ್ವರಾಜನ ಮಕ್ಕಳಾದ ಹಂಸ ಡಿಭಿಕರ ಪರವಾಗಿ ಕೃಷ್ಣನ ಜೊತೆಗೆ ಹೋರಾಡಲು ಬಂದಂತಹ ವಿಚಕ್ರ ಅನ್ನುವ ದುಷ್ಟನ ತಲೆಯನ್ನು ತೆಗೆದ. ಮಹೋದರ ಕುಂಡಧಾರ ಎಂಬ ಎರಡು ಭೂತಗಳನ್ನು ಕೃಷ್ಣ ಕೈಲಾಸಕ್ಕೆ ಓಡಿಸಿದ.ರಕ್ಕಸನಾದ ಹಿಡಿಂಬನನ್ನು ಬಲರಾಮನ ಮೂಲಕ ಒದ್ದು ಓಡಿಸಿದ. ಸಾತ್ಯಕಿಯಿಂದ ಸಾಲ್ವ ರಾಜನಾದ ಬ್ರಹ್ಮದತ್ತನನ್ನು ಕೊಲ್ಲಿಸಿದ. ಹೀಗೆ ಜಯಶೀಲರಾದ  ಬಲರಾಮ, ಸಾತ್ಯಕಿ, ಪ್ರದ್ಯುಮ್ನನೇ ಮೊದಲಾದವರಿಂದ ಕೂಡಿ ಹಂಸನನ್ನು,ಡಿಭಿಕನನ್ನು ತಮಸ್ಸಿಗೆ ತಳ್ಳಿದ.ಈ ಹೋರಾಟದಲ್ಲಿ ಅವನ ಜೊತೆಯಲ್ಲಿದ್ದ ರೋಹಿಣಿಯ ಮಗನಾದ ಗದಾ, ಕೃಷ್ಣನಿಗೆ ಪ್ರೀತಿಯ ತಮ್ಮನಾದ. ಅವನಿಗೆ ಎಲ್ಲಾ ರೀತಿಯಿಂದ ಸಹಕರಿಸುವ ಅಣ್ಣನಾಗಿಯೂ ಕೃಷ್ಣ ಗದಾಗ್ರಜ ಅನ್ನಿಸಿಕೊಂಡ. ಪರಿಶುದ್ದರಾದ ಪರಶುಕ್ಲತ್ರಯರಾದ ಲಕ್ಷ್ಮೀ ,ವಾಯು, ಸರಸ್ವತಿ ಈ ಮೂವರಿಗೂ ಅವರವರ ಅಭೀಷ್ಟಗಳನ್ನು ನೀಡಿ ಮೆರೆದ.

**ಪಾರ್ಥ–ಶ್ರಿಯೇ ಹಾರ್ದಿಕ–ಮುಕ್ ಕುರೂಂಶ್ಚ ಗಾತ್ವಾಽಽಪ್ತ–ಭಾರ್ಯಾನ್ ದ್ವಿರವಾಪ ಪಾರ್ಥಾನ್ ।**
**ಅಥಾಭಿಷಿಚ್ಯೇಂದ್ರ–ಪುರೇ ನಿಧಾಯ ಪಾರ್ಥಾನ್ ಸ ಸತ್ಯಾ–ಜನಕ–ಘ್ನಮಾಸ್ಯತ್ ॥ ೧೭ ॥**
**ತಾತ್ಪರ್ಯ :** ಭೀಮಾರ್ಜುನರು ಗುರುದಕ್ಷಿಣೆಯನ್ನು ಸಲ್ಲಿಸುವ ನೆಪದಿಂದ ದ್ರುಪದನನ್ನು ಗೆದ್ದು ಸೆರೆಹಿಡಿದು ಗುರುಗಳ (ದ್ರೋಣರ) ಪಾದಕ್ಕೆ ಒಪ್ಪಿಸಿದರು. ಅಂತಹ ಪರಾಕ್ರಮವನ್ನು ತೋರಿಸಿದ ಭೀಮಾಜುನರನ್ನು ಅಭಿನಂದಿಸಲು ಕೃತವರ್ಮನನ್ನು ಕಳುಹಿಸಿಕೊಟ್ಟ. 'ಅರಗಿನ ಮನೆಯಲ್ಲಿ ಪಾಂಡವರು ಸತ್ತರು' ಎಂಬ ಸುದ್ದಿಯನ್ನು ಕೇಳಿ ಕೃಷ್ಣನು ನಂಬಿದವನಂತೆ ಹಸ್ತಿನಾವತಿಗೆ ಬಂದು, ಅಲ್ಲಿ ತರ್ಪಣಾದಿ ಕಾರ್ಯಗಳನ್ನು ನಡೆಸಿ ಗುರುಗಳನ್ನು ಭೇಟಿಯಾದ. ಮದುವೆಯಾದ ಪಾಂಡವರನ್ನು ಮತ್ತೆ ಎರಡು ಬಾರಿ ಅವರಿಗೆ ಸಾಂತ್ವನವನ್ನು ನೀಡಿದ.ಆ ಬಳಿಕ ಮತ್ತೆ ಹಸ್ತಿನಾವತಿಯಲ್ಲಿ ಪಂಡವರನ್ನು ನೆರೆಗೊಳಿಸಿ ಅವರಿಗೆ ಪಟ್ಟಾಭಿಷೇಕವನ್ನು ಮಾಡಿದ. ಕೆಲವು ದಿನಗಳ ಬಳಿಕ ಮತ್ತೆ ಹಸ್ತಿನಾವತಿ  ಇಬ್ಬಾಗವಾಗಿ ಇಂದ್ರಪ್ರಸ್ಥದಲ್ಲಿ ಪಾಂಡವರಿಗೆ ನೆಲೆಗೊಳ್ಳುವ ಅವಕಾಶ ಸಿಕ್ಕಿದಾಗಲೂ, ಕೃಷ್ಣ ಅವರಿಗೆ ಅಭಿಷೇಕಕ್ಕೆ ಒಳಪಡಿಸಿ ಸುಭದ್ರವಾಗಿ ನೆಲೆಗೂರುವಂತೆ ಮಾಡಿದ.ಇಂದ್ರಪ್ರಸ್ಥದಿಂದ ಮರಳಿ ಸತ್ಯಭಾಮೆಯ ತಂದೆಯಾದ ಸತ್ರಾಜಿತನನ್ನು ಕೊಲೆಗೈದ ಶತಧನ್ವನನ್ನು ಬೆನ್ನಟ್ಟಿದ. ಅವನು ಮಾಡಿದ ತಪ್ಪಿಗೆ ಶಿಕ್ಷಿಸಿ ಕೊಂದ.

**ಪ್ರದರ್ಶ್ಯ ರತ್ನಂ ಹಲಿನೇಽರ್ಕಪುತ್ರೀ–ಮವಾಪ ನೀಲಾಮಪಿ ಸ ದ್ವಿ–ರೂಪಾಮ್ ।**
**ಸ–ಮಿತ್ರವಿಂದಾಮಥ ಕೈಕಯೀಂ ಚ ಭದ್ರಾಂ ತು ಮಾದ್ರೀಮಪಿ ಲಕ್ಷಣಾಖ್ಯಾಮ್ ॥೧೮॥**
**ತಾತ್ಪರ್ಯ :** ಅಕ್ರೂರನ ಬಳಿ ಇದ್ದ ಸ್ಯಮಂತಕಮಣಿಯನ್ನು ಬಲರಾಮನಿಗೆ ತೋರಿಸಿದ. ಸೂರ್ಯಪುತ್ರಿಯಾದ ಕಾಳಿಂದಿಯನ್ನು ಕೈಹಿಡಿದ. ಕುಂಭಕನ ಮಗಳಾದ ನೀಲೆಯೇ ಮುಂದೆ ನಗ್ನಜಿತ್ತಿನ ಮಗಳಾಗಿ ಎರಡನೆಯ ರೂಪವನ್ನು ತೊಟ್ಟು ಬಂದಳು. ಅಂತಹ ನೀಲೆಯನ್ನೇ (ಹಿಂದೊಮ್ಮೆ ಉಪನಯನದ ಪೂರ್ವದಲ್ಲಿ ಮದುವೆಯಾದವಳು )ಕೃಷ್ಣನು ಮದುವೆಯಾದ.ಆ ಬಳಿಕ ಮಿತ್ರವಿಂದ ಅನ್ನುವವಳನ್ನು ಮದುವೆಯಾದ. ಕೈಕೇಯದೇಶದ ಮಗಳಾಗಿದ್ದ ಭದ್ರೆಯನ್ನು ಮದುವೆಯಾದ. ಮದ್ರದೇಶದ ಲಕ್ಷಣೆಯನ್ನು ಸ್ವಯಂವರದಲ್ಲಿ ವರಿಸಿದ.

**ತಂ ನಾರದೋಽಥಾಖಿಲ–ರಾಜ–ಮಧ್ಯೇಪ್ರೋಚೇ ತ್ವಮಾಶ್ಚರ್ಯ–ತಮೋಽಸಿ ಧನ್ಯಃ ।**
**ಕುಂತ್ಯರ್ಥಿತಃ ಪಾರ್ಥ–ಕುರೂನಜೈಷೀತ್ ಇತ್ಥಂ ಮುರಾದೀನ್ ನರಕಂ ಚ ಸೋಽಹನ್ ॥೧೯॥**
**ತಾತ್ಪರ್ಯ :** ಎಲ್ಲಾ ಅರಸರು ನೆರೆದಿದ್ದ ದೊಡ್ಡ ಸಭೆಯಲ್ಲಿ ಕೃಷ್ಣನನ್ನು ನಾರದಮುನಿ ಬಾಯಿ ತುಂಬಾ ಕೊಂಡಾಡಿದ. "ನೀನು ಅಚ್ಚರಿಗಳಲ್ಲಿ ದೊಡ್ಡ ಅಚ್ಚರಿ! ನೀನೇ ಧನ್ಯತಮನಾಗಿದ್ದಿ " ಹೇಳಿದ. ಅದೇ ಸಭೆಯಲ್ಲಿ ಕುಂತಿಯೂ  ಕೃಷ್ಣನನ್ನು ಕೇಳಿಕೊಳ್ಳುತ್ತಾಳೆ." ಇದೊಂದು ಸಾಮರಸ್ಯದ ಯುದ್ಧ,ಇಲ್ಲಿರುವ  ಎಲ್ಲಾ ಅರಸರನ್ನು ಕೂಡ ನೀನು ಯುದ್ಧದಲ್ಲಿ ಸೋಲಿಸಬೇಕು". ಎಂದು ಕೇಳಿಕೊಳ್ಳುತ್ತಾಳೆ .ಕೃಷ್ಣ ಆ ಮಾತನ್ನು ನಡೆಸಿ ಪಾಂಡವರನ್ನು,ಕೌರವರನ್ನು ಲೀಲೆಯಿಂದ ಗೆಲ್ಲುತ್ತಾನೆ . ಹಾಗೆಯೇ ಆ ರಾಜರು ಕೃಷ್ಣನಲ್ಲಿ "ನಮ್ಮ ಮಕ್ಕಳ್ಳನ್ನು ನರಕಾಸುರನಿಂದ ರಕ್ಷಿಸು" ಎಂದು ಕೇಳಿಕೊಳ್ಳುತ್ತಾರೆ. ಅವರ ಅಪೇಕ್ಷೆಯಂತೆ ಕೃಷ್ಣನು ನರಕನ ನಾಡಿಗೆ ತೆರಳ್ಳುತ್ತಾನೆ. ಅಸಮ  ಅಂದರೆ ಇವತ್ತಿನ ಅಸ್ಸಾಂ ಅನ್ನುವ ಜಾಗದಲ್ಲಿ ಹೋಗಿ ನರಕಾಸುರನ ದೊಡ್ಡ ಪರಿವಾರ ಮುರಾ ಮೊದಲಾದವರನ್ನೆಲ್ಲಾ ಯುದ್ಧದಲ್ಲಿ ಮುಗಿಸಿದ. ಅವರ ಮಾಯಾವಿದ್ಯೆಗಳನ್ನೆಲ್ಲ ಕೊನೆಗಾಣಿಸಿದ. ಕೊನೆಗೆ ನರಕನನ್ನು ಕೊಂದ.

**ಸತ್ಯಾರ್ಥಮೀಶೋ ಹೃತ-ಪಾರಿಜಾತೋ ದೇವೌಘ-ಜಿದ್ ದ್ವ್ಯಷ್ಟ-ಸಹಸ್ರ-ಭಾರ್ಯಃ ।**
**ಪ್ರತ್ಯೇಕಮೇತಾಸು ದಶಾಽಪ ಪುತ್ರಾನ್ ಸುತೌ ವಿಜಿಷ್ಣೂ ಅಪಿ ಸೋಽಭ್ಯನಂದತ್ ॥ ೨೦ ॥**
**ತಾತ್ಪರ್ಯ :** ವಾಸುದೇವ, ಸತ್ಯಭಾಮೆಯ ಒಡೆಯನಾಗಿ ನರಕಾಸುರನ ಮನೆಯಲ್ಲಿ ಪಡೆದಂತಹ ಕುಂಡಲಗಳನ್ನು ಅದಿತಿಗೆ ಒಪ್ಪಿಸುವುದಕ್ಕಾಗಿ ದೇವಲೋಕಕ್ಕೆ ಹೋದ. ಅಲ್ಲಿಂದ ಆತಿಥ್ಯ ಪಡೆದು ಬರುವಾಗ ಪಾರಿಜಾತವನ್ನು ಕಿತ್ತು ತಂದ. ತಡೆಯಲು ಬಂದಂತಹ ಸುರರ ದೊಡ್ಡ ಪಡೆಯನ್ನು ಅನಾಯಾಸವಾಗಿ ಗೆದ್ದ. ನರಕಾಸುರನ ಸೆರೆಯಲ್ಲಿದ್ದ ೧೬,೧೦೦ ರಾಜಕುಮಾರಿಯರನ್ನು ಬಿಡಿಸಿದ. ಕೊನೆಗೆ ಅವರದ್ದೇ ಅಪೇಕ್ಷೆಯಂತೆ ತಾನೇ ಅವರನ್ನು ಮದುವೆಯಾದ. ಅವರಲ್ಲಿ ೧೦ ಜನ ಗಂಡು ಮಕ್ಕಳು ೧ ಹೆಣ್ಣು ಮಗಳನ್ನು ಸಂತತಿಯಾಗಿ ಪಡೆದ. ಸುರಲೋಕ,  ನಾಗಲೋಕಗಳನ್ನು ಗೆದ್ದು ಬಂದ ಸಾಂಬಾ ಮತ್ತು ಪ್ರದ್ಯುಮ್ನರನ್ನು ಬಹಳ ಪ್ರೀತಿಯಿಂದ ಅಪ್ಪಿ ಅಭಿನಂದಿಸಿದ.

**ಸ ನಾರದಾವೇಕ್ಷಿತ-ವಿಶ್ವರೂಪಃ ಪುರೇ ಸುಭದ್ರಾಂ ವಿಜಯಾಯ ಚಾದಾತ್ ।**
**ದದೌ ಸ-ರಾಮೋ ಬಹು ರತ್ನಮಸ್ಮೈ ದದಾಹ ಪಾರ್ಥೇನ ಚ ಖಾಂಡವಂ ಸಃ ॥೨೧॥**
**ತಾತ್ಪರ್ಯ :** ದ್ವಾರಕೆಯಲ್ಲಿ ತನ್ನ ಲೀಲೆಯನ್ನು ಕಾಣಲು ಬಂದ ನಾರದರಿಗೆ ತನ್ನ ವಿಶ್ವರೂಪವನ್ನು ತೋರಿಸಿದ. ಸುಭದ್ರೆಯನ್ನು ಅರ್ಜುನನಿಗೆ ಧಾರೆ ಎರೆದು ಕೊಟ್ಟ. ಬಲರಾಮನೊಡನೇ ಇಂದ್ರಪ್ರಸ್ಥಕ್ಕೆ ತೆರಳಿ ಅರ್ಜುನನಿಗೆ ಕೈತುಂಬ ಮುತ್ತುರತ್ನಗಳ ಉಡುಗೋರೆಯನಿತ್ತ. ಅರ್ಜುನನ ಮೂಲಕ ಖಾಂಡವವನವನ್ನು ಸುಟ್ಟ.

**ಸಮಂತ-ಪೂರ್ವಂ ಖಲು ಪಂಚಕಂ ಚ ಗತೋ ವ್ಯಧತ್ತಾಽಹ್ನಿಕಮಶ್ವ-ಮೇಧಮ್ ।**
**[ಪುರಂ ವ್ರಜನ್ ಮಾರ್ಗ-ರುಧಂ ನಿರಾಸ ಸ ದಂತವಕ್ರಂ ಚ ವಿಡೂರಥಂ ಚ ೧] ॥ ೨೨ ॥**
**ತಾತ್ಪರ್ಯ :** ಸ್ಯಮಂತಪಂಚಕಕ್ಕೆ ತೆರಳಿದ. ಅಲ್ಲಿ ಒಂದೇ ದಿನದಲ್ಲಿ ಅಶ್ವಮೇಧ ಯಾಗವನ್ನು ಮುಗಿಸಿದ. ಯಾಗವನ್ನು ಮುಗಿಸಿ ದ್ವಾರಕೆಗೆ ಬರುವಾಗ ದಾರಿಯಲ್ಲಿ ಅಡ್ಡ ನಿಂತು ತಡೆದ ದಂತವಕ್ರನನ್ನು ವಿಡೂರಥನನ್ನು ಕೂಡ ಕೊಂದ.

**ಸಂಶಿಕ್ಷ್ಯ ಜಿಷ್ಣುಂ ಸ ಜರಾ-ಸುತಾರಿಂ ಭೀಮಂ ಸಮಾಶ್ಲಿಷ್ಯ ಜಘಾನ ಚೈದ್ಯಮ್**
**ನಿಹತ್ಯ ಸೌಭೇಶಮವೇಕ್ಷ್ಯ ಪಾರ್ಥಾನ್ ವನೇ ಶಿವಾರ್ಚೀ ಖಲ-ಮೋಹನಾಯ ॥೨೩॥**
**ತಾತ್ಪರ್ಯ :** ದಂತವಕ್ರನನ್ನು (ಧ್ವರಪಾಲಕನಾದ ವಿಜಯ) ಕೊಂದ ಸಂದರ್ಭದಲ್ಲಿ, ಕೃಷ್ಣನನ್ನು ಪ್ರವೇಶಿಸಿದ ಜೀವನನ್ನು ಕುರಿತು ಅರ್ಜುನ ಅಚ್ಚರಿಯಿಂದ ಪ್ರಶ್ನಿಸಿದಾಗ,ಆತ ಎತ್ತ ಹೋದ ಅನ್ನುವುದನ್ನು ತಿಳಿಸುವುದಕ್ಕಾಗಿ ತನ್ನ ಲೋಕದ ಪರಿಚಯವನ್ನು ಅರ್ಜುನನಿಗೆ ಮಾಡಿಸಿದ. ಜರಾಸಂಧನನ್ನು ಕೊಂದ ಭೀಮನನ್ನು ಬಿಗಿದು ಅಪ್ಪಿಕೊಂಡು ಅಭಿನಂದಿಸಿದ.ಶಿಶುಪಾಲನನ್ನು ಕೊಂದ. ಸೌಭವ ಎನ್ನುವಂತಹ ವಿಮಾನದ ಒಡೆಯನಾದ ಸಾಲ್ವನನ್ನು ಕೊಂದು ಅವನಿಂದ ಆಗುತ್ತಾ ಇದ್ದ ಉಪಟಲವನ್ನು ಪರಿಹರಿಸಿದ. ಕಾಡಿನಲ್ಲಿದ್ದ ಪಾಂಡವರನ್ನು ಕಂಡು ಸಂತೈಸಿದ. ದುರ್ಜನರ ಮೋಹಕ್ಕಾಗಿ ಬೇರೆ ಕಾಡಿನಲ್ಲಿ ಶಿವನನ್ನು ಕುರಿತು ತಪಸ್ಸು ಮಾಡಿದ. ಅವನಿಂದ ಅನುಗ್ರಹದ ರೂಪದಲ್ಲಿ ಪುತ್ರನನ್ನು ಪಡೆದ.

**ಸ ಪೌಂಡ್ರಕಂ ನಿರ್ಜಿತವಾನ್ ಜಘಾನ ತಥೈಕಲವ್ಯಂ ಚ ಸುದಕ್ಷಿಣಂ ಚ**
**ಭೇಷ್ಮ್ಯಾ ವ್ಯಧಾತ್ ಪ್ರೇಮಕಲೇರ್ವಿಡಂಬಂ ರಾಮಂ ವ್ರಜಂ ಯಾಂತಮರ್ಥಾಽತ್ಮ-ವಾಕ್ಯಾತ್ ॥೨೪॥**
**ತಾತ್ಪರ್ಯ :** ಕೈಲಾಸದಿಂದ ಮರಳಿ ಬಂದಂತಹ ಕೃಷ್ಣ ಪೌಂಡ್ರಕ ವಾಸುದೇವನನ್ನು ಸೋಲಿಸಿದ. ಅಷ್ಟೇ ಅಲ್ಲ ಮತ್ತೂಕಾಲು ಕೆದರಿ ಬಂದ ಆತನನ್ನು ಕೊಂದ. ಅದೇ ರೀತಿ ಏಕಲವ್ಯನೂ,ಕಾಶಿರಾಜನ ಮಗನಾದ ಸುದಕ್ಷಿಣನೂ ಕೃಷ್ಣನ ಕೈಯಿಂದ ಪ್ರಾಣ ತ್ಯಕ್ತರು. ರುಕ್ಮಿಣಿಯೊಂದಿಗೆ ಪ್ರೇಮದ ಕಲಹವನ್ನು ನಡೆಸಿ ವಿನೋದವಾಡಿದ. ಹಾಗೆಯೇ ತನ್ನ ಯೋಗಕ್ಷೇಮದ ಕುರಿತಾಗಿ ನಂದಗೋಕುಲಕ್ಕೆ ಸುದ್ದಿಯನ್ನು ತಿಳಿಸುವುದಕ್ಕಾಗಿ ಬಲರಾಮನನ್ನು ಕಳುಹಿಸಿಕೊಟ್ಟ.

**ಮೈಂದಂ ಚ ಹತ್ವಾ ವಿವಿದ-ಘ್ನಮದ್ರೌ ಕೃಷ್ಣೋಽಭ್ಯನಂದತ್ ಕುರು-ಭೀಷಣಂ ಚ**
**ಅಗ್ನ್ಯಾದಿ-ಜಿದ್ ಬಾಣ-ಜಯೀ ಪ್ರಭಾಸೇ ಪ್ರಾಪ ಪಾರ್ಥಾನ್ ಕುರು-ರಾಷ್ಟ-ಗಾಂಶ್ಚ ।೨೫।**
**ತಾತ್ಪರ್ಯ :** ಮರಳಿ ಬಂದಂತಹ ಬಲರಾಮ ರೇವತಗಿರಿಯಲ್ಲಿ ನೆಲೆಸಿದ್ದ. ಅಲ್ಲಿಗೆ ಬಂದು ತುಂಬಾ ಉಪದ್ರವ ಕೊಟ್ಟ ಮೈಂದ ಮತ್ತು ವಿವಿದರನ್ನು ಬಲರಾಮ ಕೊಂದ. ಹಾಗೆಯೇ ನೇಗಿಲಿನಿಂದ ಕುರುಪುರವನ್ನೇ ಸೆಳೆದು ಕೌರವರನ್ನು ಬೆದರಿಸಿದ. ಅಂತಹ ಬಲರಾಮನನ್ನು ಕೃಷ್ಣ ಅಭಿನಂದಿಸಿದ. ಬಾಣನ ಕಡೆಯಿಂದ ಅಗ್ನಿದೇವತೆಯರನ್ನು ಕೂಡ ಕೃಷ್ಣ ಗೆದ್ದ. ಬಾಣನನ್ನೂ ಗೆದ್ದ. ತನ್ನ ಮೊಮ್ಮಗನಾದ ಅನಿರುದ್ಧನನ್ನು ಬಾಣನ ಮಗಳಾದ ಉಷೆಯು ಸೆಳೆದೊಯ್ದು ಅಲ್ಲಿ ಇರಿಸಿಕೊಂಡಿದ್ದಾಗ ಬಿಡಿಸಿಕೊಳ್ಳುವ ಸಮಯದಲ್ಲಿ ಈ ಘಟನೆ ನಡೆಯಿತು. ವನವಾಸದ ಕಾಲದಲ್ಲಿ ಯಾತ್ರಾರ್ಥಿಗಳಾಗಿ ಬಂದ ಪಾಂಡವರನ್ನು ಪ್ರಭಾಸ ಕ್ಷೇತ್ರದಲ್ಲಿ ಭೇಟಿಕೊಟ್ಟ. ವನವಾಸದ ಕೊನೆಯಲ್ಲಿ ಕುರುರಾಜ್ಯದ ಒಳಗೆ ಬಂದ ಪಾಂಡವರನ್ನು ಮತ್ತೆ ಭೇಟಿಯಾದ.

**ವಿವಾಹ್ಯ ಸೌಭದ್ರಮುದಾರ-ಮಂತ್ರೋ ವೃತಃ ಸ್ವ-ಪುರ್ಯಾಂ ವಿಜಯೇನ ಸೌತ್ಯೇ।**
**ಸು-ಮಂತ್ರ-ಕೃತ್ ಪಾಂಡವ-ಸೌತ್ಯ-ಕಾರೀ ಸ ವಿಶ್ವ-ರೂಪೋಽರ್ಜುನ-ಶಿಕ್ಷಕೋಽಭಾತ್ ॥ ೨೬॥**
**ತಾತ್ಪರ್ಯ :** ಸುಭದ್ರೆಯ ಮಗನಾದ ಅಭಿಮನ್ಯುವಿಗೆ ವಿರಾಟನ ಮಗಳಾದ ಉತ್ತರೆಯ ಜೊತೆಗೆ ವಿವಾಹವನ್ನು ಮಾಡಿಸಿದ.ಮುಂದಿನ ಕಾರ್ಯ ಚಟುವಟಿಕೆಗಳ ಬಗ್ಗೆ ಪಾಂಡವರ ಜೊತೆಗೆ ಹಾಗೂ ಸಂಜಯನ ಜೊತೆಗೆ ಉನ್ನತವಾದ ಮಂತ್ರಾಲೋಚನೆಯನ್ನು ಮಾಡಿದ. ಮತ್ತೆ ದ್ವಾರಕೆಗೆ ಬಂದಂತಹ ಕೃಷ್ಣ,ಅರ್ಜುನ ಮತ್ತೆ ದುರ್ಯೋಧನನಿಂದ ಪ್ರಾರ್ಥಿತನಾದ. ಅರ್ಜುನ ತನ್ನ ಗಾಡಿಯ ಸಾರಥಿ ಆಗಬೇಕು ಎಂಬುದಾಗಿ ಬೇಡಿಕೊಂಡ. ಶಾಂತಿದೂತನಾಗಿ ಪಾಂಡವರ ಪರವಾಗಿ ಹಸ್ತನಾವತಿಗೆ ತೆರಳಿ ಕೌರವರಿಗೆ "ಯುದ್ಧ ಬೇಡ"ಎಂಬ ಸಂದೇಶವನ್ನು ಕೊಟ್ಟ. ಅರ್ಜುನನ ಸಾರಥಿಯೂ ಆಗಿ ಕಾರ್ಯ ನಿರ್ವಹಿಸಿ,ಯುದ್ಧವನ್ನು ಕೈ ಚೆಲ್ಲಿ ಬೇಸತ್ತಂತಹ ಅರ್ಜುನನಿಗೆ ತನ್ನ ವಿಶ್ವರೂಪವನ್ನು ತೋರಿಸುತ್ತಾ ನಿಜವಾದ ತತ್ವ ಸ್ವಧರ್ಮ ಆಚರಣೆಯ ಮಹತ್ವವನ್ನು ತಿಳಿಸಿ ಆತನನ್ನು ಮತ್ತೆ ಯುದ್ಧದಲ್ಲಿ ತೊಡಗುವಂತೆ ಮಾಡಿ ಬೆಳಗಿದ.

**ಸ್ವಾನಂದನಂ ಮಂದ-ಮನೋಜ್ಞ-ಹಾಸಂ ಶೃಂಗಾರಿಣಂ ಶಾರ್ಙ್ಗಣವೀಕ್ಷಣಾಭ್ಯಾಮ್ ।**
**ಮುಷ್ಣಂತಮಾಯೂಂಷಿ ತಮೀಕ್ಷಮಾಣಾ ಯೌಧಾ ಗತಿಂ ಯೋಗ-ಜಿತಾಮವಾಪುಃ ॥೨೭॥**
**ತಾತ್ಪರ್ಯ :** ಶಾರ್ಙ್ಗ ಧನುಸ್ಸನ್ನು ಹಿಡಿದಂತಹ ಭಗವಂತನ ಸ್ವರೂಪ ಆನಂದಮಯ. ಮುದ್ದಾದ ಮುಗುಳುನಗೆಯಿಂದ ಎಲ್ಲರನ್ನು ತನ್ನೆಡೆಗೆ ಸೆಳೆಯುವ ಮರುಳುಗೊಳಿಸುವ ಶೃಂಗಾರಮಯನಾದ ಕೃಷ್ಣ ತನ್ನ ಕುಡಿನೋಟದಿಂದಲೇ ೧೮ ಅಕ್ಷೋಹಿಣಿ ಸೈನ್ಯದ ಪೂರ್ಣ ಆಯುಷ್ಯವನ್ನು ಹೀರಿಕುಡಿದ. ಆ ಯುದ್ಧದಲ್ಲಿ ಹೋರಾಡಿದಂತಹ ಎಲ್ಲಾ ವೀರರು ಕೃಷ್ಣನನೇ ನೋಡುತ್ತಾ ಯೋಗಸಿದ್ದರು ಪಡೆಯುವಂತಹ ಮಹಾಗತಿಯನ್ನು ಅಂದರೆ ಉತ್ತಮ ಗತಿಯನ್ನು ಪಡೆದರು.

**ಭೀಷ್ಮ-ಪ್ರತಿಜ್ಞಾನ್ನಮಪೀಪಲತ್ ಸ ಭೀಷ್ಮೋಕ್ತ-ಭೂಮಾ ಹೃತ-ವೈಷ್ಣವಾಸ್ತ್ರ: ।**
**ಸ್ವಪ್ನೇಽರ್ಜುನಾನುಗ್ರಹ-ಕೃತ್ ಸುಭದ್ರಾ-ಶೋಕ-ಚ್ಛಿದೀಶಃ ಸ್ವನಯನ್ ಸ್ವ-ಶಂಖಮ್ ॥೨೮॥**
**ತಾತ್ಪರ್ಯ :** 'ಕೃಷ್ಣನ ಕೈಯಲ್ಲಿ "ನಾನು ಖಂಡಿತವಾಗಿಯೂ ಆಯುಧವನ್ನು ಹಿಡಿಸುತ್ತೇನೆ "ಅನ್ನುವುದು ಭೀಷ್ಮನ ಪ್ರತಿಜ್ಞೆ, ಕೃಷ್ಣ ಅದನ್ನು ಉಳಿಸಿದ,ಹಾಗೆಯೇ ಭೀಷ್ಮನಿಂದ ಸ್ತುತನಾದ. ಅನೇಕ ಉತ್ತಮವಾದ ಮಾತುಗಳಿಂದ ಕೃಷ್ಣ ಸ್ತೋತ್ರಕ್ಕೆ ಒಳಗಾದ. ಭಗದತ್ತ ಎಸೆದಂತಹ ವೈಷ್ಣವಾಸ್ತ್ರ ಕೃಷ್ಣನ ಕೊರಳಿಗೆ ಬಂದು ಮಾಲೆಯಾಗಿ ನಿಂತಿತು. ಅರ್ಜುನನನ್ನು ಕನಸಿನಲ್ಲಿ ಶಿವನೆಡೆಗೆ ಕರೆದೊಯ್ದ. ಅಭಿಮನ್ಯುವಿನ ಸಾವಿನಿಂದ ಕಂಗೆಟ್ಟು ಸ್ಥಿತಿಗೆಟ್ಟು ಯುದ್ಧವನ್ನು ಮಾಡುವುದಿಲ್ಲ ಎಂಬ ಸ್ಥಿತಿಯಲ್ಲಿ ಇದ್ದ ಅರ್ಜುನನಿನಗೆ ಶಿವನಿಂದ ಉಪದೇಶವನ್ನು ಕೊಡಿಸಿ,ಮತ್ತೆ ಯುದ್ಧಕ್ಕಾಗಿ ಹುರಿಗೊಳಿಸಿದ. ಮಗನನ್ನು ಕಳೆದುಕೊಂಡ ದುಃಖದಿಂದ ಸುಭದ್ರೆಯನ್ನು ಪಾರುಗೊಳಿಸಿದ. ಜಗದೊಡೆಯನಾದಂತಹ ಶ್ರೀಹರಿ ತನ್ನ ಪಾಂಚಜನ್ಯ ಶಂಖವನ್ನು ಗಟ್ಟಿಯಾಗಿ ಊದಿ ಅರಿಗಳ ಬಲವನ್ನು ನಡುಗಿಸಿದ.

**ಶೈನೇಯ-ಪೋ ವಾಸವಿನಾ ಜಘಾನ ಜಯದ್ರಥಂ ನೀತಿ-ನಿವಾರಿತಾಸ್ತ್ರ: ।**
**ದ್ರೌಣೇಷು-ಬದ್ಧಾರ್ಜುನ-ವೀರ್ಯ-ಕಾರೀ ರಾಜೇಂದ್ರ-ಸೂನ್ವೋಃ ಸ ವಿರೋಧಮಾಸ್ಯತ್ ॥೨೯॥**
**ತಾತ್ಪರ್ಯ :** ಶಿನಿಯ ಮೊಮ್ಮಗನಾದ ಯುಯುಧಾನನಿಗೆ ಮತ್ತೊಂದು ಹೆಸರು ಸಾತ್ಯಕಿ.ಅವನನ್ನು ಭೂರಿಶ್ರವನ ಕೈಯಿಂದ ಕಾಪಾಡಿದ.ಅರ್ಜುನನಿಂದ ಜಯದ್ರಥನನ್ನು ಕೊಲ್ಲಿಸಿದ್ದ. ತನ್ನ ನಯವಂತಿಕೆಯಿಂದ ಸಮಸ್ತ ಪಾಂಡವ ಸೇನೆಯನ್ನು ಅಶ್ವತ್ಥಾಮನ ನಾರಾಯಣ ಅಸ್ತ್ರದಿಂದ ಪಾರು ಮಾಡಿದ. ಅಶ್ವತ್ಥಾಮನ ಶರಪಂಜರದಲ್ಲಿ ಸೆರೆಯಾಗಿದ್ದ ಅರ್ಜುನನನ್ನು ಬಿಗಿದಪ್ಪಿ ಬಲ ತುಂಬಿದ. ಧರ್ಮರಾಜನಿಗೂ ಅರ್ಜುನನಿಗೂ ಉಂಟಾದ ವಿರೋಧವನ್ನು ತನ್ನ ಲೀಲೆಯಿಂದಲೇ ಪರಿಹರಿಸಿದ.

**ಅಪಾತ್ ಸ ಪಾರ್ಥಂ ರಥಮಾನಮಯ್ಯ ಭೀಮಂ ಚ ತುಷ್ಟಾವ ನಿನಿಂದ ದುಷ್ಟಮ್।**
**ದೌಣಿಂ ಸ ಶಪ್ತ್ವಾಽಽಂಬಿಕ-ದೋಷ-ದರ್ಶೀ ಕೃಷ್ಟಾಂ ಪ್ರಸಾದ್ಯಾಭಿಷಿಷೇಚ ಧಾರ್ಮಮ್ ॥ ೩೦ ॥**
**ತಾತ್ಪರ್ಯ :** ರಥವನ್ನು ನಾಲ್ಕು ಅಂಗುಲದಷ್ಟು ಕೆಳಕ್ಕೆ ತಳ್ಳಿ ಕರ್ಣನ ನಾಗಾಸ್ತ್ರದಿಂದ ಅರ್ಜುನನನ್ನು ಕಾಪಾಡಿದ. ಭೀಮ ದುರ್ಯೋಧನನನ್ನು ಕೊಂದ ಬಗೆಯನ್ನು ಸಮರ್ಥಿಸಿ ಹೊಗಳಿದ. ದುರುಳನಾದ ದುರ್ಯೋಧನನ್ನು ಚೆನ್ನಾಗಿ ಹೀಗಳೆದ. ಗರ್ಭಕ್ಕೆ ಬ್ರಹ್ಮಾಸ್ತ್ರವನ್ನು ಎಸೆದು ಅಪರಾಧಗೈದ ದ್ರೋಣ ತನಯನಾದ ಅಶ್ವತ್ಥಾಮನನ್ನು ಶಪಿಸಿದ. ಧೃತರಾಷ್ಟ್ರನ ತಪ್ಪನ್ನು ಎತ್ತಿ ತೋರಿಸಿ ತಿಳಿ ಹೇಳಿದ. ಮಕ್ಕಳನ್ನು ಕಳೆದುಕೊಂಡ ದ್ರೌಪದಿಯನ್ನು ಸಂತೈಸಿದ. ಧರ್ಮರಾಜನಿಗೆ ಪಟ್ಟಾಭಿಷೇಕವನ್ನು ಕಟ್ಟಿ ಧರ್ಮ ರಾಜ್ಯವನ್ನು ನೆಲೆಗೊಳಿಸುವಂತೆ ಮಾಡಿದ.

**ಸ್ವಯಂ ಚ ಭೀಷ್ಮೇಣ ಚ ಶಿಕ್ಷಯಿತ್ವಾ ಭೂಪಂ ಸ ಭೀಮೇನ ಕಲಿಂ ನಿಬಧ್ಯ ।**
**ಜಿಷ್ಣೋರ್ಗುರುಃ ಕಾರುಣಿಕೋಽಪ್ಯುದಂಕೇ ಗತ್ವಾ ಪುರೀಂ ಸ್ವೇಭ್ಯ ಉವಾಚ ವೃತ್ತಮ್ ।೩೧॥**
**ತಾತ್ಪರ್ಯ :** ತಾನು ನೇರವಾಗಿ ಮತ್ತು ಭೀಷ್ಮನ ಮೂಲಕ ಅನೇಕ ತತ್ವಗಳನ್ನು ಧರ್ಮರಾಜನಿಗೆ ಹೇಳಿ ಆತನ ಮನಸ್ಸನಲ್ಲಿದ್ದ 'ತಪ್ಪು ಮಾಡಿದೆ ' ಎನ್ನುವ ಭಾವವನ್ನು ತೆಗೆದ. ಭೀಮನ ಮೂಲಕ ಕಲಿಯನ್ನು ನಿರ್ಬಂಧಗೊಳಿಸಿದ. ಅರ್ಜುನನನಿಗೆ ಮತ್ತೊಮ್ಮೆ ಅಣುಗೀತೆಯನ್ನು ಉಪದೇಶಿಸಿದ. ಶಾಪವೀಯಲು ಹೊರಟಿದಂತಹ ಉದಂಕನಿಗೆ ತನ್ನ ವಿಶ್ವರೂಪವನ್ನು ತೋರಿಸಿ ಅನುಗ್ರಹಿಸಿದ. ದ್ವಾರಕೆಗೆ ತೆರಳಿ ತನ್ನವರಿಗೆ ಇಲ್ಲಿ ನಡೆದ ಎಲ್ಲಾ ಸುದ್ದಿಯನ್ನು ಅರುಹಿದ.

**ವ್ರಜನ್ನುದಂಕೇಷ್ಟ-ಕೃದೇಷ ಪಾರ್ಥಾನ್ ಪರೀಕ್ಷಿತೇ ಜೀವನ-ದೋಽಂಗವಾದೀ।**
**ಅಯಾಜಯದ್ ಧರ್ಮಜಮಶ್ವ-ಮೇಧೈಃ ಊಚೇ ಚ ಧರ್ಮಾನಯಜತ್ ಸ್ವಯಂ ಚ । ೩೨ ॥**

**ತಾತ್ಪರ್ಯ :** ಪಾಂಡವರ ಹತ್ತಿರ ಬರುತ್ತಿದ್ದ ಉದಂಕ ಮುನಿಯ ಅಭೀಷ್ಟವನ್ನು ಪೂರೈಸಿದ. ಸತ್ತು ಹುಟ್ಟಿದ ಪರೀಕ್ಷಿತನನ್ನು ಮತ್ತೆ ಬದುಕಿಸಿದ.ಅರ್ಜುನನ ದೇಹದ ಲಕ್ಷಣವನ್ನು ಅಂಗಲಕ್ಷಣವನ್ನು ತಿಳಿಸಿದ. ಧರ್ಮರಾಜನಿಂದ ಹಲವು ಅಶ್ವಮೇಧಗಳನ್ನು ಮಾಡಿಸಿದ. ಧರ್ಮದ ಮರ್ಮವನ್ನು ತಿಳಿಸಿ ತಾನು ಕೂಡ ಕುರುಕ್ಷೇತ್ರದಲ್ಲಿ ಯಾಗ ನಡೆಸಿದ.

**ಸುರಾರ್ಚಿತಃ ಶಿಕ್ಷಕ ಉದ್ಧವಸ್ಯ ಸ್ವಂ ಬ್ರಹ್ಮ-ಶಾಪ-ಚ್ಛಲತಃ ಕುಲಂ ಚ ।**
**ಸಂಹೃತ್ಯ ಕೃಷ್ಣೋ ನಿಜ-ಚಿತ್ತ-ಪದ್ಮೇ ದೇದೀಪ್ಯತೇ ದೇವ ಉತ ಸ್ವ-ಲೋಕೇ ॥ ೩೩ ।**

**ತಾತ್ಪರ್ಯ :** ಚತುರ್ಮುಖನೇ ಮೊದಲಾದ ದೇವತೆಗಳಿಂದ ಕೃಷ್ಣ ಅರ್ಚಿತನಾದ. 'ಮರಳಿ ಬರಬೇಕು 'ಅನ್ನುವ ಅವರ ಕೋರಿಕೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೊರಡುವ ಸಮಯವನ್ನು ಗಮನಿಸಿ ಉದ್ದವನಿಗೆ ಜ್ಞಾನದ ಉಪದೇಶಗಳನ್ನು ಮಾಡಿದ. ಋಷಿಗಳ ಶಾಪದ ನೆಪದಿಂದ ತನ್ನ ಕುಲವನ್ನು ಯಾದವ ಸೇನೆಯನ್ನು ಉಪಸಂಹರಿಸಿದ. ಹೀಗೆ ಅವತಾರದ ಲೀಲೆಯನ್ನು ಉಪಸಂಹರಿಸಿದ ಕೃಷ್ಣ ತನ್ನವರ ಹೃತ್ಕಮಲದ ಮಧ್ಯದಲ್ಲಿ ನಿರಂತರ ನೆಲೆಸಿದ. ಅಷ್ಟೇ ಅಲ್ಲದೆ ಮರಳಿ ವೈಕುಂಠವನ್ನು ಬೆಳಗಿದ.

**ಉದ್ಧೃತ್ಯ ಶಾಸ್ತ್ರಾಂಬು-ನಿಧೇರ್ನಿಬದ್ಧಾ-ಮಭೀಷ್ಟ-ದಾತ್ರೀಮಿವ ರತ್ನಮಾಲಾಮ್ ॥**
**ನಾರಾಯಣಸ್ಯಾರ್ಪಯತೇ ಪದಾಬ್ಜೇನಾರಾಯಣಃ ಶ್ರೀಮತಿ ಕೃಷ್ಣ-ಮಾಲಾಮ್ ॥ ೩೪ ॥**

**ತಾತ್ಪರ್ಯ :** ಮುತ್ತಿನ ಮಾಲೆಯಂತೆ ಶಾಸ್ತ್ರದ ಕಡಲಿನಿಂದ ಹೆಕ್ಕಿ ತೆಗೆದು ಪೋಣಿಸಿದ, ನಮ್ಮೆಲ್ಲರ ಬಯಕೆಗಳನ್ನು ತಪ್ಪದೇ ನಡೆಸಿಕೊಡುವ, ಈ ಕೃಷ್ಣನ ಮಾಲೆಯನ್ನು ನಾರಾಯಣ ಪಂಡಿತಾಚಾರ್ಯರು ಶ್ರೀ ನಾರಾಯಣನ ಚೆಲುವಿನ ಪದಕಮಲಗಳಲ್ಲಿ ಅರ್ಪಿಸುತ್ತಿದ್ದಾರೆ.

**ಸೂಚನೆ : ಇಲ್ಲಿ ಶ್ಲೋಕದ ತಾತ್ಪರ್ಯವನ್ನು ಮಾತ್ರ ನೀಡಲಾಗಿದೆ. ಶ್ಲೋಕ ಸಂಬಂಧಿತ ಹೆಚ್ಚಿನ ಕಥಾಭಾಗವು ಭಾಗವತ ಪುರಾಣದ ದಶಮಸ್ಕಂದದಲ್ಲಿ ಲಭ್ಯವಿರುತ್ತದೆ.**

~~~॥ ಶ್ರೀ ಕೃಷ್ಣಾರ್ಪಣಮಸ್ತು ॥~~~
~~~